ಅಸಲು ದಾವಾ ನಂ. 17/2021 ಡಿಡಬ್ಲೂ : 1

ದಿನಾಂಕಃ 11-10-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರವಾಗಿಃ ಶ್ರೀ ಆರ್ ಜಿ ಹೆಚ್ ವಕೀಲರಿಂದಃ**

9. ನನ್ನ ತಾಯಿಯ ಹೆಸರು ಪ್ರಭಾವತಿ ಎಂದರೆ ಸರಿ . ದಿಃ 27-08-2016 ರಂದು ನನ್ನ ತಾಯಿ ತೀರಿ ಹೋಗಿರುತ್ತಾರೆ ಎಂದರೆ ಸರಿ . ನನ್ನ ತಾಯಿ ತೀರಿ ಹೋದ ನಂತರ ದಾವಾ ಆಸ್ತಿಗಳ ರೆಕಾರ್ಡ ಅವರ ಮಕ್ಕಳಾದ ನಮ್ಮ ಹೆಸರಿನಲ್ಲಿ ಬದಲಾವಣೆ ಆಯಿತು ಎಂದರೆ ಸರಿ . 2 ನೇ ವಾದಿ ಗೋವಾದಲ್ಲಿ ಇದ್ದಾರೆ ಎಂದರೆ ಸರಿ . ನನ್ನ ತಾಯಿ ಗೋವಾದಲ್ಲಿ ತೀರಿಹೋಗಿರುತ್ತಾರೆ ಎಂದರೆ ಸಾಕ್ಷಿಯು ಅವರು ದಾಂಡೇಲಿಯಲ್ಲಿ ತೀರಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ . ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಗೋವಾದ ಮರಗೋವಾದ ನಗರಸಭೆಯವರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ದಾಂಡೇಲಿಯ ಸರ್ಕಾರಿ ಆಸ್ಪತ್ರೆಯವರು ಕೊಟ್ಟಿರುವ ಮರಣ ದಾಖಲೆಯೂ ಸಹ ಇದೆ ಎಂದು ನುಡಿಯುತ್ತಾರೆ . ಸಾಕ್ಷಿಗೆ ತನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ತೋರಿಸಲಾಗಿ ಅವರು ಅದನ್ನು ಗುರುತಿಸಿದ್ದು ಅದನ್ನು ನಿಪಿ -36 ಎಂದು ಗುರುತಿಸಲಾಯಿತು. ನನ್ನ ತಾಯಿ ಗೋವಾದಲ್ಲಿ ತೀರಿ ಹೋಗಿರುವುದರಿಂದ ಅವರ ಶವವನ್ನು ಕರ್ನಾಟಕಕ್ಕೆ ತರಲು ಪೋಲಿಸರಿಂದ ಅನುಮತಿ ಬೇಕಾಗುತ್ತಿತ್ತು ಎಂದರೆ ಸರಿ . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು ಮರಗೋವಾ ನಗರ ಪೋಲಿಸ್ ಠಾಣೆಯವರು ತನ್ನ ತಾಯಿಯ ಶವವನ್ನು ಸಾಗಿಸಲು ಕೊಟ್ಟಿರುವ ನಿರಾಕ್ಷೇಪಣಾ ಪ್ರಮಾಣ ಪತ್ರ ಎಂದು ಹೇಳಲಾಗಿ ಸಾಕ್ಷಿಯು ಅದನ್ನು ಒಪ್ಪಿದ್ದರಿಂದ ಅದನ್ನು ನಿಪಿ -37 ಎಂದು ಗುರುತಿಸಲಾಯಿತು. ನನ್ನ ತಾಯಿಯ ಶವವನ್ನು ಕರ್ನಾಟಕಕ್ಕೆ ತಂದು ಗೋಕರ್ಣದಲ್ಲಿ ನಮ್ಮ ಸಂಪ್ರದಾಯದಂತೆ ಶವ ಸಂಸ್ಕಾರವನ್ನು ಮಾಡಿರುತ್ತೇವೆ ಎಂದರೆ ಸರಿ . ಅದೇ ರೀತಿ ನಮ್ಮ ಸಂಪ್ರದಾಯದ ಪ್ರಕಾರ ನಾವು 12 ದಿವಸಗಳವರೆಗೆ

ಸೂತಕವನ್ನು ಆಚರಿಸಿರುತ್ತೇವೆ ಎಂದರೆ ಸರಿ . ಸೂತಕ ಕಳೆದ ನಂತರ 12 ನೇ ದಿವಸದಲ್ಲಿ ಗೋಕರ್ಣದಲ್ಲಿ ವೈಕುಂಠ ಸಮಾರಾಧನೆಯನ್ನು ಶಾಸ್ತ್ರೋಕ್ತವಾಗಿ ವೈದಿಕ ಸಂಪ್ರದಾಯದಂತೆ ಮಾಡಿರುತ್ತೇವೆ ಎಂದರೆ ಸರಿ . ಈ ರೀತಿ ಮಾಡುವಾಗ ನಾನು ಮತ್ತು ನನ್ನ ಎಲ್ಲಾ ಸಹೋದರ , ಸಹೋದರಿಯವರು ಸೇರಿಕೊಂಡೇ ಮಾಡಿರುತ್ತೇವೆ ಎಂದರೆ ಸರಿ . ಸಾಮಾನ್ಯವಾಗಿ ನಮ್ಮ ವೈದಿಕ ಸಂಪ್ರದಾಯದ ಪ್ರಕಾರ ನಮ್ಮ ಮನೆಯಲ್ಲಿ ಯಾರಾದರೂ ತೀರಿಹೋದರೆ 12 ದಿವಗಳವರೆಗೆ ಮನೆಯ ಸದಸ್ಯರು ಹೊರಗೆ ಹೋಗುವುದಿಲ್ಲ ಎಂದರೆ ಸರಿ . ಆ ಸಂದರ್ಭದಲ್ಲಿ ಯಾವುದೇ ಒಳ್ಳೆಯ ಕೆಲಸವನ್ನು ಸಹ ಮಾಡುವುದಿಲ್ಲ ಎಂದರೆ ಸರಿ . ಅದೇ ರೀತಿ ಆ ಸಂದರ್ಭದಲ್ಲಿ ಯಾವುದೇ ಆಸ್ತಿಯನ್ನು ಮಾರಾಟವನ್ನೂ ಸಹ ಮಾಡುವುದಿಲ್ಲ ಎಂದರೆ ಸರಿ .

10. ಎಲ್ಲಾ ದಾವಾ ಆಸ್ತಿಗಳು ನಮಗೆ ನಮ್ಮ ತಂದೆಯವರಿಂದ ವಾರಸುನಾತೆಯಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು ಅವುಗಳು ತನ್ನ ಮುತ್ತಜ್ಜ ಅಂದರೆ ತನ್ನ ತಂದೆಯ ತಂದೆಯ ತಂದೆಯ ಕಡೆಯಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ . ನನ್ನ ತಂದೆ ತೀರಿಹೋದ ನಂತರ ನಾನು ನಮ್ಮ ಕುಟುಂಬದ ಹಿರಿಯ ಸದಸ್ಯನಾಗಿದ್ದರಿಂದ ಅವಿಭಕ್ತ ಕುಟುಂಬದ ಮ್ಯಾನೇಜರ್ ನಾತೆಯಿಂದ ದಾವಾ ಆಸ್ತಿಗಳ ರೆಕಾರ್ಡ ನನ್ನ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ . ಸದರಿ ಆಸ್ತಿಗಳ ರೆಕಾರ್ಡ ನನ್ನ ಹೆಸರಿನಲ್ಲಿ ದಾಖಲಾಗಿದ್ದರೂ ಸಹ ಅದರಲ್ಲಿ ನನ್ನ ಸಹೋದರ , ಸಹೋದರಿಯರಿಗೆ ಇದ್ದಂತಹ ಹಕ್ಕು ಇತ್ತು ಎಂದರೆ ಸರಿ . ನಾನು ಹುಟ್ಟಿದಾಗಿನಿಂದ ದಾಂಡೇಲಿಯಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಮತ್ತು ನನ್ನ ಸಹೋದರ , ಸಹೋದರಿಯರು ದಾಂಡೇಲಿಯಲ್ಲಿಯೇ ಹುಟ್ಟಿ ದೊಡ್ಡವರಾಗಿರುತ್ತೇವೆ ಎಂದರೆ ಸರಿ . ಇತ್ತೀಚಿನ ಸುಮಾರು 5 ರಿಂದ 6 ವರ್ಷಗಳಿಂದ ನನ್ನ ಮತ್ತು ನನ್ನ ಸಹೋದರರ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿ . ದಾಂಡೇಲಿಯಲ್ಲಿರುವ ನಮ್ಮ ಕುಟುಂಬದ ಮೂಲ ಮನೆಯಲ್ಲಿ ನಾನು ವಾಸ ಮಾಡುತ್ತಿದ್ದೇನೆ . ಈಗ 1 ನೇ ವಾದಿಯು ದಾಂಡೇಲಿಯಲ್ಲಿ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ . ದಾವಾ ಆಸ್ತಿಗಳ ಲೆಕ್ಕ ಪತ್ರಗಳನ್ನು ಹಾಗೂ ಅದರ ವ್ಯವಹಾರ ಹಾಗೂ ವಿಚಾರಗಳನ್ನು ನಾನು ನನ್ನ ಸಹೋದರರೊಂದಿಗೆ ಹಂಚಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿಯು ಅದನ್ನು ತನ್ನ ತಾಯಿಯೊಂದಿಗೆ ಹಂಚಿಕೊಳ್ಳುತ್ತಿದ್ದೆನು ,

ತಾಯಿಯು ಅದನ್ನು ತನ್ನ ಎಲ್ಲಾ ಸಹೋದರ , ಸಹೋದರಿಯರಿಗೆ ಹೇಳುತ್ತಿದ್ದರು ಎಂದು ನುಡಿಯುತ್ತಾರೆ . ನನ್ನ ತಾಯಿ ತೀರಿ ಹೋದ ನಂತರ ಅಂದರೆ 2016 ನೇ ಇಸವಿಯ ನಂತರ ದಾವಾ ಆಸ್ತಿಗಳ ಲೆಕ್ಕ ಪತ್ರಗಳನ್ನು ಹಾಗೂ ಅದರ ವ್ಯವಹಾರ ಹಾಗೂ ವಿಚಾರಗಳನ್ನು ನಾನು ನನ್ನ ಸಹೋದರರೊಂದಿಗೆ ಹಂಚಿಕೊಳ್ಳುತ್ತಿಲ್ಲ ಎಂದರೆ ಸರಿ . 2021 ನೇ ಇಸವಿಯಲ್ಲಿ ದಾವಾ ಆಸ್ತಿಗಳ ಲೆಕ್ಕ ಪತ್ರಗಳನ್ನು ಹಾಗೂ ಅದರ ವ್ಯವಹಾರ ಹಾಗೂ ವಿಚಾರಗಳನ್ನು ನಮಗೆ ತಿಳಿಸಬೇಕು ಎಂದು ವಾದಿಯರು ನನ್ನ ಹತ್ತಿರ ಹೇಳಿರುತ್ತಾರೆ ಎಂದರೆ ಸರಿಯಲ್ಲ . ಆ ಸಂದರ್ಭದಲ್ಲಿ ನಾನು ಅವರಿಗೆ ದಾವಾ ಆಸ್ತಿಗಳು ಮಾರಾಟ ಆಗಿವೆ , ಅದರಲ್ಲಿ ಅವರಿಗೆ ಯಾವುದೇ ಹಕ್ಕು ಇಲ್ಲ ಎಂದು ವಾದಿಯರಿಗೆ ಹೇಳಿರುತ್ತೇನೆ ಎಂದರೆ ಸಾಕ್ಷಿಯು ನಾನೇನು ಅವರ ಹತ್ತಿರ ಮಾತನಾಡಿಲ್ಲ ಎಂದು ನುಡಿಯುತ್ತಾರೆ .

11. 2011 ನೇ ಇಸವಿಯಲ್ಲಿ ನಾನು , ನಮ್ಮ ತಾಯಿ ಹಾಗೂ ವಾದಿಯರು ಸೇರಿಕೊಂಡು 2 ನೇ ಪ್ರತಿವಾದಿಗೆ ಒಂದು ಸಾರ್ವತ್ರಿಕ ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ . ಸದರಿ ಮೊಕ್ತಾರನಾಮೆಗೆ ಛಾಪಾ ಕಾಗದವನ್ನು ನಾನೇ ಖರೀದಿ ಮಾಡಿರುತ್ತೇನೆ ಎಂದರೆ ಸರಿ . ಸದರಿ ಮೊಕ್ತಾರನಾಮೆಯ ಛಾಪಾ ಕಾಗದವನ್ನು ಖರೀದಿ ಮಾಡುವ ಸಂದರ್ಭದಲ್ಲಿ ಅದರ 2 ನೇ ಪಕ್ಷಗಾರರು ಯಾರು ಎಂಬ ವಿಷಯ ನನಗೆ ಗೊತ್ತಿತ್ತು , ಆದರೆ ಅದನ್ನು ಸದರಿ ಛಾಪಾ ಕಾಗದದಲ್ಲಿ ಎಂಟ್ರಿ ಮಾಡಿಸಲು ನನಗೆ ಗೊತ್ತಿರಲಿಲ್ಲ. ಸದರಿ ಸಾಮಾನ್ಯ ಮೊಕ್ತಾರನಾಮೆ ನಿಡಿ –1 ಆಗಿರುತ್ತದೆ . ನಿಡಿ–1 ರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ ಎಂದರೆ ಸರಿ . ನಿಡಿ–1 ಕ್ಕೆ ನಾನು ಎಲ್ಲಾ ಓದಿಕೊಂಡೇ ಸಹಿ ಮಾಡಿರುತ್ತೇನೆ . ನಿಡಿ–1 ರಲ್ಲಿ ಹೇಳಿರುವ ಅತೀಕ್ರಮಣ ಖುಲ್ಲಾ ಪಡಿಸುವ ಬಗ್ಗೆ 2 ನೇ ಪ್ರತಿವಾದಿಯು ಕ್ರಮ ಕೈಗೊಂಡಿದ್ದರೂ ಸಹ ಅದು ಸಾಧ್ಯವಾಗಿಲ್ಲ. ಆ ರೀತಿ 2 ನೇ ಪ್ರತಿವಾದಿಯು ಆ ಬಗ್ಗೆ ಏನು ಕ್ರಮಗಳನ್ನು ಕೈಗೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ದಾವಾ ಆಸ್ತಿಗಳ ಬಗ್ಗೆ ಏನೇ ವಿಷಯವಿದ್ದರೂ ಸಹ 2 ನೇ ಪ್ರತಿವಾದಿಯು ನನಗೆ ಹೇಳುತ್ತಿದ್ದರು ಎಂದರೆ ಸಾಕ್ಷಿಯು ಅವರು ತನ್ನ ತಾಯಿಗೆ ಹೇಳುತ್ತಿದ್ದರು , ತಾಯಿ ನಮಗೆಲ್ಲರಿಗೂ ಹೇಳುತ್ತಿದ್ದರು ಎಂದು ನುಡಿಯುತ್ತಾರೆ . ನನ್ನ ತಾಯಿ ಕಿಡ್ನಿ ಸಮಸ್ಯೆಯಿಂದ ತೀರಿ

ಹೋಗಿರುತ್ತಾರೆ ಎಂದರೆ ಸರಿ . ನನ್ನ ತಾಯಿಗೆ 2008 ನೇ ಇಸವಿಯಿಂದ ಕಿಡ್ನಿ ಸಮಸ್ಯೆ ಪ್ರಾರಂಭವಾಗಿರುತ್ತದೆ . ನನ್ನ ತಾಯಿಗೆ 2012 ರಿಂದ ಡಯಾಲಿಸಿಸ್ ಮಾಡುತ್ತಿದ್ದೆವು . 2012 ನೇ ಇಸವಿಯಲ್ಲಿ ನಮ್ಮ ತಾಯಿಯ ಆರೋಗ್ಯ ಅಷ್ಟೇನು ಚೆನ್ನಾಗಿರಲಿಲ್ಲ ಎಂದರೆ ಸರಿ . ನನ್ನ ತಾಯಿಯವರು ಎಸ್ ಎಸ್ ಎಲ್ ಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನಮ್ಮ ತಾಯಿಗೆ ಹೆಚ್ಚು ಅಡ್ಡಾಡಲು ಸಾಧ್ಯವಾಗದ ಕಾರಣ ನನ್ನ ತಂದೆ ತೀರಿಹೋದ ನಂತರ ದಾವಾ ಆಸ್ತಿಗಳ ರೆಕಾರ್ಡ ಅ.ಕು.ಮೆ ನಾತೆಯಿಂದ ನನ್ನ ಹೆಸರಿಗೆ ದಾಖಲಾಗಿರುತ್ತದೆ . ನಿಡಿ-1 ನೋಂದಣಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನಿಡಿ-1 ನ್ನು ಬರೆದುಕೊಟ್ಟಾದ ನಂತರ ಅದು ಏನಾಯಿತು ಎಂದು ನನಗೆ ಗೊತ್ತಿಲ್ಲ . ನಿಡಿ-1 ರಲ್ಲಿ ದಸ್ತಾವೇಜುಗಳಿಗೆ ನಮ್ಮ ವತಿಯಿಂದ ಸಹಿ ಮಾಡಲು 2 ನೇ ಪ್ರತಿವಾದಿಗೆ ನಾವು ಅಧಿಕಾರ ಕೊಟ್ಟಿಲ್ಲ ಎಂದರೆ ಸರಿ . ಸಾಕ್ಷಿಯು ಪುನಃ ಹೇಳುತ್ತಾರೆ ಎಲ್ಲಾದಕ್ಕೂ ಅಂದರೆ ದಸ್ತಾವೇಜುಗಳಿಗೂ ನಮ್ಮ ವತಿಯಿಂದ ಸಹಿ ಮಾಡಲು 2 ನೇ ಪ್ರತಿವಾದಿಗೆ ನಿಡಿ-1 ರಲ್ಲಿ ಅಧಿಕಾರ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ . ನಿಡಿ-1 ನ್ನು ದಸ್ತಾವೇಜುಗಳಿಗೆ ಸಹಿ ಮಾಡುವುದನ್ನು ಬಿಟ್ಟು ಬೇರೆ ಎಲ್ಲದಕ್ಕೂ ನಾವು ಅಧಿಕಾರ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

12. ಅದೇ ರೀತಿ 2012 ನೇ ಇಸವಿಯಲ್ಲಿ ಶಾರದಾ ವಿಶ್ವೇಶ್ವರ ಗೋಪಿರವರು 2 ನೇ ಪ್ರತಿವಾದಿಗೆ ಸಾರ್ವತ್ರಿಕ ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . ಆ ರೀತಿ ಸದರಿ ಶಾರದಾ ಗೋಪಿಯವರು ಮೊಕ್ತಾರನಾಮೆಯನ್ನು ಬರೆದುಕೊಡುವಾಗ ನಾನು ಹಾಜರಿರಲಿಲ್ಲ . 2011 ನೇ ಇಸವಿಯಲ್ಲಿ ನಾವು 2 ನೇ ಪ್ರತಿವಾದಿಗೆ ನಿಡಿ -1 ನ್ನು ಬರೆದುಕೊಟ್ಟ ಸಂದರ್ಭದಲ್ಲಿ ನಮ್ಮ ಮತ್ತು 2 ನೇ ಪ್ರತಿವಾದಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ. ನಿಡಿ-1 ನ್ನು ಬರೆದುಕೊಟ್ಟ ಸಂದರ್ಭದಲ್ಲಿ 3 ರಿಂದ 11 ನೇ ಪ್ರತಿವಾದಿಯರು ನನಗೆ ಯಾವುದೇ ಹಣವನ್ನು ಕೊಟ್ಟಿಲ್ಲ. ನಿಡಿ-1 ರ ಆಧಾರದ ಮೇರೆಗೆ 2 ನೇ ಪ್ರತಿವಾದಿಯು ಎಷ್ಟು ಕ್ರಯ ಪತ್ರಗಳನ್ನು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ-1 ಕ್ಕೆ ದಿಃ 10-04-2015 ರಂದು 2 ನೇ ಪ್ರತಿವಾದಿಯು ಮುದ್ರಾಂಕ ಶುಲ್ಕವನ್ನು ತುಂಬಿರುತ್ತಾರೆ ಎಂದರೆ ಸರಿ.

ದಿಃ 03-05-2012 ರಂದು 2 ನೇ ಪ್ರತಿವಾದಿಯು ದಾವಾ ಕೆಲವು ಆಸ್ತಿಗಳ ಬಗ್ಗೆ 3 ರಿಂದ 5 ನೇ ಪ್ರತಿವಾದಿಗಳಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . 3 ರಿಂದ 5 ನೇ ಪ್ರತಿವಾದಿಯರು ಖರೀದಿ ಮಾಡಿರುವ ಸದರಿ ಆಸ್ತಿಗಳಿಗೆ ಖರೀದಿಯ ಪೂರ್ವದಲ್ಲಿ ಅವರು ಅತೀಕ್ರಮಣದಾರರಾಗಿದ್ದರು ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಯರು ನಾವು ಚಿಕ್ಕವರಿದ್ದಾಗಿನಿಂದಲೂ ಸದರಿ ಆಸ್ತಿಗಳನ್ನು ಅತೀಕ್ರಮಣ ಮಾಡಿಕೊಂಡು ಬಂದಿರುತ್ತಾರೆ . ದಿಃ 03-05-2012 ರಂದು 3 ರಿಂದ 5 ನೇ ಪ್ರತಿವಾದಿಯರಿಗೆ ಅವರು ಖರೀದಿ ಮಾಡಿರುವ ಸದರಿ ಆಸ್ತಿಗಳ ಕಬ್ಜಾವನ್ನು ಕೊಟ್ಟಿದ್ದರೋ ಇಲ್ಲವೋ ಎಂದು ನನಗೆ ನೆನಪಿಲ್ಲ. 3 ರಿಂದ 5 ನೇ ಪ್ರತಿವಾದಿಯರಿಗೆ ಸದರಿ ಆಸ್ತಿಗಳು 2,02,500/- ರೂಪಾಯಿಗೆ ಮಾರಾಟ ಆಗಿರುವ ವಿಷಯ ನನಗೆ ಗೊತ್ತಿಲ್ಲ. ಸದರಿ 2,02,500/- ರೂಪಾಯಿ ನನಗೆ ಸಂದಾಯವಾಗಿಲ್ಲ ಎಂದರೆ ಸರಿ .

13. ದಿಃ 08-05-2012 ರಂದು 2 ನೇ ಪ್ರತಿವಾದಿಯು ದಾವಾ ಆಸ್ತಿಗಳ ಪೈಕಿ ಗೋಕರ್ಣ ಗ್ರಾಮದ ಸರ್ವೆ ನಂ. 1678/1 ರಲ್ಲಿ ಇರುವ 27 ಗುಂಟೆಯನ್ನು 6 ನೇ ಪ್ರತಿವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. 6 ನೇ ಪ್ರತಿವಾದಿಯು ಸಹ ಸದರಿ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಅವರು ಅತೀಕ್ರಮಣದಾರರಾಗಿದ್ದರು ಎಂದರೆ ಸರಿ . 2012 ನೇ ಇಸವಿಯಲ್ಲಿ 6 ನೇ ಪ್ರತಿವಾದಿಯು ನನ್ನ ಹತ್ತಿರ ಬಂದು ಸದರಿ ಆಸ್ತಿಯನ್ನು ಯೋಗ್ಯ ಬೆಲೆಗೆ ಖರೀದಿ ಮಾಡುತ್ತೇನೆ ಎಂದು ನನ್ನ ಹತ್ತಿರ ಕೇಳಿಲ್ಲ. ಸದರಿ ಆಸ್ತಿಯು ಎಷ್ಟು ರೂಪಾಯಿಗೆ ಮಾರಾಟವಾಯಿತು ಎಂಬ ವಿಷಯವೂ ಸಹ ನನಗೆ ಗೊತ್ತಿಲ್ಲ ಎಂದರೆ ಸರಿ . ಸದರಿ ಆಸ್ತಿಯು ಸಹ 2,02,500/- ರೂಪಾಯಿಗೆ ಮಾರಾಟವಾಗಿತ್ತು ಎಂದರೆ ಇರಬಹುದು . ಸದರಿ 2,02,500/- ರೂಪಾಯಿಯೂ ಸಹ ನನಗಾಗಲೀ , ನನ್ನ ಸಹೋದರ , ಸಹೋದರಿಯರಿಗಾಗಲೀ ಸಿಗಲಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ ಸದರಿ 2,02,500/- ರೂಪಾಯಿ ತನ್ನ ತಾಯಿಗೆ ಕೊಟ್ಟಿರುತ್ತಾರೆ ಎಂದು . ಮೇಲೆ ಹೇಳಿದ ಎರಡೂ ಕ್ರಯ ದಸ್ತಾವೇಜುಗಳ ಒಟ್ಟೂ ರಕಂ 4,05,000/- ರೂಪಾಯಿಯನ್ನು 2 ನೇ ಪ್ರತಿವಾದಿಯು ನನ್ನ ತಾಯಿಗೆ

ನಗದು ರುಷಪದಲ್ಲಿ ಕೊಟ್ಟಿರುತ್ತಾರೆ . ಆ ಕಾಲಕ್ಕೆ ನನ್ನ ತಾಯಿ ನನ್ನ ಜೊತೆಯಲ್ಲಿಯೇ ಇದ್ದರು . ಸದರಿ 4,05,000/- ರೂಪಾಯಿಯನ್ನು , ನನ್ನ, ನನ್ನ ತಾಯಿ ಹಾಗೂ ನನ್ನ ಸಹೋದರ ಸಹೋದರಿಯರ ನಡುವೆ ಸಮನಾಗಿ ಹಂಚಿಕೊಂಡಿರುತ್ತೇವೆ . ಈ ರೀತಿ ಸದರಿ ಹಣವನ್ನು ನಮ್ಮೊಳಗೆ ಸಮನಾಗಿ ಹಂಚಿಕೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನಾವು ಮಾಡಿಕೊಂಡಿರುವುದಿಲ್ಲ. ನಾನು ಹೇಳಿದಂತೆ ಸದರಿ ರಕಂನಲ್ಲಿ ವಾದಿಯರಿಗೆ ಯಾವುದೇ ರಕಂ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

14. ದಿಃ 10-04-2015 ರಂದು 2 ನೇ ಪ್ರತಿವಾದಿಯು ದಾವಾ ಕೆಲವು ಆಸ್ತಿಗಳ ಬಗ್ಗೆ 8 ನೇ ಪ್ರತಿವಾದಿಗೆ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಮೌಲ್ಯ 4,90,000/- ರೂಪಾಯಿ ಎಂದರೆ ನನಗೆ ಗೊತ್ತಿಲ್ಲ . ಅದನ್ನೂ ಸಹ ನಗದಾಗಿ ನನ್ನ ತಾಯಿಯವರಿಗೆ ಕೊಟ್ಟಿರುತ್ತಾರೆ . ಆ ರೀತಿ ಸದರಿ 4,90,000/- ಹಣವನ್ನು ನನ್ನ ತಾಯಿಯವರಿಗ ಕೊಟ್ಟಿರುವ ಬಗ್ಗೆ ನನ್ನ ತಾಯಿಯವರು ನನಗೆ ಹೇಳಿರುವುದಿಲ್ಲ. 6 ನೇ ಪ್ರತಿವಾದಿಯು ಸಹ ಸದರಿ ಆಸ್ತಿಯಲ್ಲಿ ಬಹಳ ವರ್ಷಗಳಿಂದ ಅತೀಕ್ರಮಣದಲ್ಲಿ ಇದ್ದರು ಎಂದರೆ ಸರಿ . ಆ ರೀತಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಗಳ ಮೌಲ್ಯ ತುಂಬಾ ಜಾಸ್ತಿ ಇತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

15. ದಿಃ 17-09-2016 ರಂದು 2 ನೇ ಪ್ರತಿವಾದಿಯು ದಾವಾ ಸರ್ವೆ ನಂ. 1678/5 ರಲ್ಲಿ ಇರುವ 6 ಗುಂಟೆ ಕ್ಷೇತ್ರವನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ . ದಾವಾ ಎ ಶೆಡ್ಯೂಲ್ ಆಸ್ತಿಗಳು ಅತ್ಯಂತ ಬೆಲೆಬಾಳುವ ಆಸ್ತಿಗಳು ಎಂದರೆ ಸರಿ . ದಾವಾ ಎ ಶೆಡ್ಯೂಲ್ ಆಸ್ತಿಗಳ ಪ್ರತಿ ಗುಂಟೆಗೆ ಎಷ್ಟು ಬೆಲೆ ಇದೆ ಎಂದು ನನಗೆ ಗೊತ್ತಿಲ್ಲ . ಸದರಿ 6 ಗುಂಟೆ ಕ್ಷೇತ್ರವನ್ನು ಕೇವಲ 2,40,000/- ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ತನಗೆ 2,40,000/- ರೂಪಾಯಿಗೆ ಕೊಡಿ ಎಂದು 10 ನೇ ಪ್ರತಿವಾದಿಯು

ನನ್ನ ಹತ್ತಿರ ಕೇಳಿರುವುದಿಲ್ಲ. ಸದರಿ 2,40,000/- ರೂಪಾಯಿಯೂ ಸಹ ಏನಾಯಿತು ಎಂದು ನನಗೆ ಗೊತ್ತಿಲ್ಲ.

16. 9 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ . 9 ನೇ ಪ್ರತಿವಾದಿಗೆ ಯಾವುದೇ ಸ್ವತಂತ್ರವಾದ ಉದ್ಯೋಗ ಇಲ್ಲ ಎಂದರೆ ಸರಿ . ದಿಃ 02-09-2016 ರಂದು 2 ನೇ ಪ್ರತಿವಾದಿಯು ದಾವಾ ಬಿ ಶೆಡ್ಯೂಲ್ ಆಸ್ತಿಯ ಬಗ್ಗೆ 9 ನೇ ಪ್ರತಿವಾದಿಯ ಹೆಸರಿಗೆ ಕ್ರಯ ದಸ್ತಾವೇಜನ್ನು ಮಾಡಿರುತ್ತಾರೆ ಎಂದರೆ ಸರಿ . ಸದರಿ ಆಸ್ತಿಯನ್ನು 2 ನೇ ಪ್ರತಿವಾದಿಯು 9 ನೇ ಪ್ರತಿವಾದಿಯ ಹೆಸರಿಗೆ 4 ಲಕ್ಷ ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ಆ ರೀತಿ ಖರೀದಿ ಮಾಡಿರುವ ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು 9 ನೇ ಪ್ರತಿವಾದಿಯು ಅತೀಕ್ರಮಣ ಮಾಡಿಕೊಂಡಿರಲಿಲ್ಲ. ಸದರಿ 4 ಲಕ್ಷ ರೂಪಾಯಿಯನ್ನು ನನಗೆ ಕೊಟ್ಟಿರುತ್ತಾರೆ . ಸದರಿ ಕ್ರಯಪತ್ರದಲ್ಲಿ ದಾವಾ ಬಿ ಶೆಡ್ಯೂಲ್ ಆಸ್ತಿ ಕೃಷಿ ಜಮೀನಾಗಿದ್ದು ಅದನ್ನು ಕೃಷಿ ಉದ್ದೇಶಕ್ಕೆ ಮಾತ್ರ ಬಳಸಬೇಕು ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಆಸ್ತಿಯನ್ನು ದಿಃ 19-04-2017 ರಂದು 9 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 9 ನೇ ಪ್ರತಿವಾದಿಯು 11 ನೇ ಪ್ರತಿವಾದಿಗೆ 5 ಲಕ್ಷ ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .

17. ದಿಃ 17-09-2016 ರಂದು 2 ನೇ ಪ್ರತಿವಾದಿಯು 10 ನೇ ಪ್ರತಿವಾದಿಗೆ ಮೇಲೆ ಹೇಳಿದಂತೆ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ಮುದ್ರಾಂಕ ಶುಲ್ಕದ ಸಲುವಾಗಿ ಸದರಿ ಆಸ್ತಿಯ ಮೌಲ್ಯವನ್ನು 5,50,000/- ರೂಪಾಯಿ ಎಂದು ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬುದ್ಯಾ ಪೂರ್ವಕವಾಗಿ ಕ್ರಯದ ಪ್ರತಿಫಲವನ್ನು ಕಡಿಮೆ ತೋರಿಸಿ ವಾದಿಯರಿಗೆ ಲುಕ್ಸಾನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಈ ಎಲ್ಲಾ ಕ್ರಯದ ವ್ಯವಹಾರವನ್ನು ನಾನು ಮತ್ತು 2 ನೇ ಪ್ರತಿವಾದಿಯು ಸೇರಿಕೊಂಡು ಮಾಡಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಮೇಲೆ ಹೇಳಿದ ಶಾರದಾ ಗೋಪಿ ನನ್ನ ದೊಡ್ಡಮ್ಮ ಎಂದರೆ ಸರಿ . 2015 ರಿಂದ ಶಾರದಾ ಗೋಪಿರವರು ತೀರಿ ಹೋಗುವ ತನಕ ದಾಂಡೇಲಿಯಲ್ಲಿ ನನ್ನ ಜೊತೆಯಲ್ಲಿ ಇದ್ದರು . 2015 ರವರೆಗೆ ಸದರಿ ಶಾರದಾ ಗೋಪಿರವರು ಧಾರೇಶ್ವರದಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು . 12 ನೇ ಪ್ರತಿವಾದಿ ನನ್ನ ಹೆಂಡತಿ ಎಂದರೆ ಸರಿ . ಸದರಿ ಶಾರದಾ ಗೋಪಿರವರು 12 ನೇ ಪ್ರತಿವಾದಿಗೆ ಬರೆದಿಟ್ಟಿದ್ದರು ಎಂದು ಹೇಳಿದ ವಿಲ್ ನಾಮೆಯನ್ನು ಅಂಕೋಲಾದಲ್ಲಿ ಬರೆಸಿರುತ್ತಾರೆ , ಆ ಸಂದರ್ಭದಲ್ಲಿ ನಾನು ಹಾಜರಿದ್ದೆನು . ಸದರಿ ವಿಲ್ ನಾಮೆಯನ್ನು ಗೋಕರ್ಣದ ಒಬ್ಬ ವಕೀಲರು ಬರೆದಿರುತ್ತಾರೆ . ಆ ರೀತಿ ವಿಲ್ ನಾಮೆಯನ್ನು ಬರೆಯುವ ದಿವಸ ವಿಲ್ ನಾಮೆ ಬರೆಯುವ ಆಸ್ತಿಗಳ ದಾಖಲೆಗಳನ್ನು ಸದರಿ ಶಾರದಾ ಗೋಪಿರವರು ತೆಗೆದುಕೊಂಡು ಹೋಗಿರುತ್ತಾರೆ . ಆ ಸಂದರ್ಭದಲ್ಲಿ ಶಾರದಾ ಗೋಪಿರವರಿಗೆ ಅಂದಾಜು 70 ವರ್ಷ ವಯಸ್ಸಾಗಿರಬಹುದು. ಸದರಿ ಶಾರದಾ ಗೋಪಿರವರು ಬಹಳ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿ . ಸದರಿ ಶಾರದಾ ಗೋಪಿರವರಿಗೆ ವಾದಿಯರ ಮೇಲೆ ನನ್ನ ಮೇಲೆ ಇರುವಷ್ಟೇ ಪ್ರೀತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಶಾರದಾ ಗೋಪಿರವರಿಗೆ ಮಕ್ಕಳಿರಲಿಲ್ಲ ಎಂದರೆ ಸರಿ . ಸರಿದ ಶಾರದಾ ಗೋಪಿರವರಿಗೆ ತನ್ನ ನಂತರದಲ್ಲಿ ತನ್ನ ಎಲ್ಲಾ ಆಸ್ತಿಗಳು ನನಗೆ ಮತ್ತು ನನ್ನ ಎಲ್ಲಾ ಸಹೋದರ , ಸಹೋದರಿಯರಿಗೆ ಹೋಗಬೇಕು ಎಂಬ ಆಸೆ ಇತ್ತು ಎಂದರೆ ಸರಿಯಲ್ಲ. ದಾಂಡೇಲಿಯಿಂದ ಧಾರೇಶ್ವರ ಸುಮಾರು 180 ಕಿಲೋ ಮೀಟರ್ ದೂರದಲ್ಲಿ ಇದೆ . ನಾನು ಹೇಳಿದ ವಿಲ್ ನಾಮಯನ್ನು ಬರೆಯುವ ಸಂದರ್ಭದಲ್ಲಿ ಶಾರದಾ ಗೋಪಿರವರಿಗೆ ವಯೋಸಹಜವಾದ ಎಲ್ಲಾ ಕಾಯಿಲೆಗಳು ಇತ್ತು ಎಂದರೆ ಸರಿಯಲ್ಲ . ಆ ಸಂದರ್ಭದಲ್ಲಿ ಶಾರದಾ ಗೋಪಿರವರಿಗೆ ತಾನು ಏನು ವ್ಯವಹಾರ ಮಾಡುತ್ತಿದ್ದೇನೆ ಎಂಬ ಬಗ್ಗೆ ಮಾನಸಿಕ ಪರಿಸ್ಥಿತಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಶಾರದಾ ಗೋಪಿರವರು ತಮ್ಮ ಹತ್ತಿರದ ಸಂಬಂಧಿಕರನ್ನೂ ಸಹ ಗುರುತು ಹಿಡಿಯುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

19. ನಾನು ಹೇಳಿದ ಮರಣ ಶಾಸನದಲ್ಲಿ ಇರುವ ಸಹಿ ಶಾರದಾ ಗೋಪಿರವರ ಸಹಿ ಅಲ್ಲ ಎಂದರೆ ಸರಿಯಲ್ಲ. ಸದರಿ ಮರಣ ಶಾಸನಕ್ಕೆ ಇಬ್ಬರು ಸಾಕ್ಷಿದಾರರಿದ್ದು ಅವರು ದಾಂಡೇಲಿಯವರಾಗಿರುತ್ತಾರೆ . ಸದರಿ

ವಿಲ್ ನಾಮೆಯ ಛಾಪಾ ಕಾಗದವನ್ನು ದಾಂಡೇಲಿಯಿಂದಲೇ ತೆಗೆದುಕೊಂಡು ಹೋಗಿರುತ್ತೇವೆ , ಅದೇ ರೀತಿ ಸದರಿ ವಿಲ್ ನಾಮೆಯ ಸಾಕ್ಷಿದಾರರನ್ನು ನಾನು ದಾಂಡೇಲಿಯಿಂದ ಕರೆದುಕೊಂಡು ಹೋಗಿರುತ್ತೇನೆ . ಸದರಿ ವಿಲ್ ನಾಮೆಯನ್ನು ದಾಂಡೇಲಿಯಲ್ಲಿಯೇ ಮಾಡಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಕುಮಟಾದಲ್ಲಿ ಆಸ್ತಿ ಇರುವುದರಿಂದ ಹಾಗೂ ನನಗೆ ಕುಮಟಾದ ವಕೀಲರ ಪರಿಚಯವಿರುವುದರಿಂದ ಸದರಿ ವಿಲ್ ನಾಮೆಯನ್ನು ಅಂಕೋಲಾದಲ್ಲಿಯೇ ಮಾಡಿಸಿರುತ್ತೇನೆ . ಸದರಿ ವಿಲ್ ನಾಮೆ ಮಾಡಿದ ದಿವಸಕ್ಕೆ ನಾನು ಹೇಳಿದ ಸದರಿ ವಕೀಲರ ಪರಿಚಯ ನನಗೆ ಆಗಿ ಸುಮಾರು ಒಂದು ವರ್ಷ ಆಗಿತ್ತು. ಸದರಿ ಮರಣ ಶಾಸನವನ್ನು ಶಾರದಾ ಗೋಪಿರವರು ಮಾಡಿರುವುದಿಲ್ಲ . ಅದನ್ನು ನಾನು ಮತ್ತು ನನ್ನ ಹೆಂಡತಿ ಸೇರಿಕೊಂಡು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಶಾರದಾ ಗೋಪಿರವರ ಸದರಿ ಆಸ್ತಿಗಳಲ್ಲಿ ವಾದಿಯರಿಗೂ ಸಹ ಹಕ್ಕು ಇದೆ ಎಂದರೆ ಸರಿಯಲ್ಲ . ಶಾರದಾ ಗೋಪಿರವರು ನಮ್ಮ ಮನೆಯಲ್ಲಿಯೇ ತೀರಿ ಹೋಗಿರುತ್ತಾರೆ . ಸದರಿ ಶಾರದಾ ಗೋಪಿರವರ ಮರಣ ಪ್ರಮಾಣ ಪತ್ರ ನನ್ನ ಹತ್ತಿರ ಇದೆ . ನನಗೆ ಕಂಪನಿಯಲ್ಲಿ ರಜೆ ಸಿಗದ ಕಾರಣ ಸದರಿ ವಿಲ್ ನಾಮೆಯನ್ನು ನೋಂದಣಿ ಮಾಡಿಸಿರುವುದಿಲ್ಲ. ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಸರಿಸಮಾನವಾದ ಹಕ್ಕು ಇದೆ ಎಂದರೆ ಸಾಕ್ಷಿಯು ಶಾರದಾ ಗೋಪಿರವರ ಆಸ್ತಿಯನ್ನು ಬಿಟ್ಟು ಉಳಿದ ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಸರಿ ಸಮಾನವಾದ ಹಕ್ಕು ಇದೆ ಎಂದು ನುಡಿಯುತ್ತಾರೆ . ನನ್ನ ಎದುರು ದಾವೆಯಲ್ಲಿ ಬರೆದಿರುವ ಎಲ್ಲಾ ವಿಷಯಗಳನ್ನು ಓದಿ ನೋಡಿ ಸರಿ ಇದೆ ಎಂದು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.